**ದಿನಾಂಕಃ05.01.2022 ರಂದು ಸಾಕ್ಷಿಯನ್ನು ಪಾಟೀ ಸವಾಲಿಗಾಗಿ ಮರಳಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 5 ನೇ ಎದುರುದಾರರ ಪರಃ ಶ್ರೀ ಎಸ್.ಎ.ಎಚ್. ವಕೀಲರಿಂದ: -**

2. ನಾನು ಮತ್ತು ಮೇಲ್ಮನವಿದಾರ ಒಂದೇ ಸಮುದಾಯಕ್ಕೆ ಸೇರಿದವರು ಅಂದರೆ ಸರಿ. ಆತ ನನಗೆ ಸುಮಾರು 20 ವರ್ಷಗಳ ಮೇಲ್ಪಟ್ಟು ಪರಿಚಯ ಇದ್ದಾರೆ. ನ್ಯಾಶನಲ್ ಉರ್ದು ಹೈಸ್ಕೂಲಿನ ಸಂಸ್ಥೆಯಲ್ಲಿ ನಾನು ಒಬ್ಬ ಸದಸ್ಯನಾಗಿದ್ದು, ಮೇಲ್ಮನವಿದಾರ ಅಲ್ಲಿ ಶಿಕ್ಷಕನಾಗಿದ್ದನು. 1 ನೇ ಎದುರುದಾರ ಸಂಸ್ಥೆಯಲ್ಲಿ ನಾನು ಸದಸ್ಯನಾಗಿದ್ದೇನು. ನನ್ನನ್ನು ಕಮಿಟಿಯಿಂದ ವಜಾಗೊಳಿಸಿದ್ದಾರೆ ಅಂದರೆ ನನ್ನೊಂದಿಗೆ 5 ಜನರನ್ನು ವಜಾಗೊಳಿಸಿದ್ದಾರೆ ಅಂತಾ ಹೇಳುತ್ತಾರೆ. ನಾನು ಸಂಸ್ಥೆಯ ವಿರುದ್ಧ ಅಕ್ರಮ ಕಾರ್ಯದಲ್ಲಿ ಭಾಗಿಯಾಗಿದ್ದಕ್ಕಾಗಿ ನನ್ನನ್ನು ಸದಸ್ಯತ್ವದಿಂದ ವಜಾಗೊಳಿಸಿದ್ದಾರೆ ಅಂದರೆ ಸರಿಯಲ್ಲ. 2010 ರಲ್ಲಿ ನಮ್ಮನ್ನು ವಜಾಗೊಳಿಸಿದ್ದಾರೆ. ನಮ್ಮನ್ನು ವಜಾಗೊಳಿಸಿದ ನಂತರ, ನಾನಾಗಲೀ ಇತರೇ ಸದಸ್ಯರಾಗಲೀ ರಜಿಸ್ಟ್ರಾರ್ ಆಫ್ ಸೊಸೈಟಿಗೆ ವಜಾಗೊಳಿಸಿದ್ದನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿಲ್ಲ.

3. ಹಿರೇಕೆರೂರು ನ್ಯಾಯಾಲಯದಲ್ಲಿ ಎದುರುದಾರರ ವಿರುದ್ಧ ಓ.ಎಸ್. ನಂ.313/2010 ನೇದ್ದನ್ನು ದಾಖಲಿಸಿದ್ದೇವು ಅಂದರೆ ಸರಿ. ಆ ದಾವೆ ವಜಾಗೊಂಡಿದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಮತ್ತೆ ಚೌಕಸಿಗಾಗಿ ಅರ್ಜಿ ಸಲ್ಲಿಸಿದ್ದೇವು ಅದು ಚಾಲ್ತಿಯಲ್ಲಿದೆ ಅಂತಾ ಹೇಳುತ್ತಾರೆ.

4. ನಾನು ಮೇಲ್ಮನವಿದಾರನಿಗೆ ಎದುರುದಾರರ ವಿರುದ್ಧ ಪ್ರಕರಣವನ್ನು ದಾಖಲಿಸಬಾರದು ಅಂತಾ ಸಲಹೆ ಮಾಡಿದ್ದೇನು. ಯಾವ ಕಾರಣಕ್ಕಾಗಿ ಮಾಡಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿಯು ಸಂಸ್ಥೆಯ ಮರ್ಯಾದೆಯ ಪ್ರಶ್ನೆ ಅಪೀಲು ಮಾಡಬೇಡ ಅಂತಾ ಹೇಳಿದ್ದೆ ಅಂತಾ ಹೇಳುತ್ತಾರೆ. ಮೇಲ್ಮನವಿದಾರನನ್ನು ವಜಾಗೊಳಿಸಿದ ಆದೇಶದ ಬಗ್ಗೆ ಗೊತ್ತಿತ್ತು ಅಂದರೆ ಸರಿ. ನಾವು ದಾವೆಯನ್ನು ಸಲ್ಲಿಸಿದ್ದಕ್ಕಾಗಿಯೂ ಕೂಡ ಮೇಲ್ಮನವಿದಾರನಿಗೆ ಪ್ರಕರಣ ದಾಖಲಿಸಬೇಡ ಅಂತಾ ಸಲಹೆ ನೀಡಿದ್ದೇವು. ನಾವು ಮಾಡಿದ ದಾವೆಗೂ ಮತ್ತು ಮೇಲ್ಮನವಿದಾರ ಮಾಡಿದ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಅಂದರೆ ಸಾಕ್ಷಿಯು ಸಂಬಂಧ ಇರುವುದಿಲ್ಲ ಅಂತಾ ಹೇಳುತ್ತಾರೆ. ಮೇಲ್ಮನವಿದಾರನನ್ನು ಮರಳಿ ಕೆಲಸಕ್ಕೆ ಸೇರಿಸಿಕೊಳ್ಳಲು ನೀವು ಯಾವ ನಿರ್ದೇಶಕರನ್ನು ಭೇಟ್ಟಿಯಾಗಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ದಾಖಲು ಮಾಡಿದ ದಾವೆಯಲ್ಲಿಯ 5 ಜನ ಸದಸ್ಯರಿಗೆ ಭೇಟ್ಟಿಯಾಗಿದ್ದೇವು ಅಂತಾ ಹೇಳುತ್ತಾರೆ. ಪ್ರಸ್ತುತ ಪ್ರಕರಣವನ್ನು ದಾಖಲು ಮಾಡುವ ಬಗ್ಗೆ ಆತ ನಮಗೆ ತಿಳಿಸಿದ್ದನು. ಆತನನ್ನು 2012 ರಲ್ಲಿ ವಜಾ ಮಾಡಲಾಗಿತ್ತು ಅಂದರೆ ಸರಿ. ಎಷ್ಟು ದಿನಗಳ ತಡವಾಗಿ ಈ ಪ್ರಕರಣ ದಾಖಲು ಮಾಡಿದ್ದ ಅಂತಾ ಗೊತ್ತಿಲ್ಲ. ನಾನು ಆತನಿಗೆ ಅನುಕೂಲ

ವಾಗುವ ರೀತಿಯಲ್ಲಿ ಪ್ರಮಾಣ-ಪತ್ರದಲ್ಲಿ ಸುಳ್ಳು ಸಂಗತಿಗಳನ್ನು ತಿಳಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಅಪೀಲನ್ನು ದಾಖಲು ಮಾಡಲು ಮೇಲ್ಮನವಿದಾರನ ನಿಶ್ಕಾಳಜಿ ಮತ್ತು ತಪ್ಪಿನಿಂದಲೇ ತಡವಾಗಿದೆ ಅಂದರೆ ಸರಿಯಲ್ಲ. ನಮಗೂ ಮತ್ತು ಎದುರುದಾರ ಸಂಸ್ಥೆಯವರಿಗೂ ಮನಸಾ ಮನಸಾ ಸರಿ ಇಲ್ಲದ ಕಾರಣ ಮೇಲ್ಮನವಿದಾರನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ**.**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**,**
ಹಾವೇರಿ**.**